# **3** ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ**.,**ರವರ ನ್ಯಾಯಾಲಯ**,** ಕಡೂರು**.**

## ಸಿ.ಸಿ.ನಂ**. 4111/2023**

ದಿನಾಂಕಃ **20-02-2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು**.**

| | | |
|---|---|---|
| ಸಾಕ್ಷಿಯ ಹೆಸರು ಃ | ಬಸವರಾಜು ಹೆಚ್ | ಪ್ರಾಸ-1 ಚಾಸಾ-6 |
| ತಂದೆಯ ಹೆಸರು ಃ | ಹನುಮಂತಪ್ಪ | |
| ವಯಸ್ಸು ಃ | 58 ವರ್ಷ | |
| ಉದ್ಯೋಗ ಃ | ಉಪ ನಿರೀಕ್ಷಕರು | |
| ವಾಸ ಃ | ಯಗಟಿ | |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ನಾನು 2020 ರಿಂದ 2023 ರವರೆಗೆ ಬೀರೂರು ಠಾಣೆಯಲ್ಲಿ ಪಿ ಎಸ್ ಗಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 06.08.2023 ರಂದು ಸಂಜೆ 7.30 ಗಂಟೆ ಸಮಯದಲ್ಲಿ ನಾನು ಬೀರೂರು ಪಟ್ಟಣದ ಶಿವಾಜಿ ಸರ್ಕಲ್ ನಲ್ಲಿ ಗಸ್ತಿನಲ್ಲಿರುವಾಗ  ಬೀರೂರು ಪಟ್ಟಣದ ಅಜ್ಜಂಪುರ ರಸ್ತೆಯಲ್ಲಿರುವ ಎ 1 ಚಿಕನ್ ಸೆಂಟರ್ ಪಕ್ಕದ ಮಣ್ಣಿನ ರಸ್ತೆಯಲ್ಲಿ ಒಬ್ಬ ಆಸಾಮಿಯು  ಅಕ್ರಮವಾಗಿ ಮದ್ಯವನ್ನು ಹಿಡಿದುಕೊಂಡು ನಿಂತಿರುವುದಾಗಿ  ಬಾತ್ಮಿದಾರರಿಂದ ಬಂದ ಖಚಿತ ಮಾಹಿತಿ ಬಂದಿರುತ್ತದೆ.  ಇದು ದಾಳಿಯ ಪ್ರಕರಣವಾದ್ದರಿಂದ ಶೋಧನಾ ವಾರೆಂಟನ್ನು ಪಡೆದು ದಾಳಿ ನಡೆಸಲು ಸಾಕಷ್ಟು ಕಾಲಾವಕಾಶ ಇಲ್ಲದೇ ಇರುವುದರಿಂದ ಹಾಗೂ ಆರೋಪಿ ತಪ್ಪಿಸಿಕೊಳ್ಳುವ ಸಾಧ್ಯತೆ ಇದ್ದುದರಿಂದ ಶೋಧನಾ ವಾರೆಂಟನ್ನು ಪಡೆಯದೇ ಅಬಕಾರಿ ಕಾಯ್ದೆ ಕಲಂ 54 ರಡಿ ಪದದತ್ತವಾದ ಅಧಿಕಾರವನ್ನು ಬಳಸಿ ಕೂಡಲೇ ದಾಳಿಗೆ ಹೊರಟಿರುತ್ತೇನೆ.  ಬೀರೂರಿನ ಶಿವಾಜಿ ಸರ್ಕಲ್ ಬಳಿ ಮಾತನಾಡುತ್ತಾ ನಿಂತಿದ್ದ  ಚಾಸಾ-2 ಮತ್ತು 3 ರವರನ್ನು ಕರೆದು ಪರಿಚಯ ಮಾಡಿಕೊಂಡು ನಮಗೆ ಬಂದ ಮಾಹಿತಿಯನ್ನು ತಿಳಿಸಿ ದಾಳಿಗೆ ಪಂಚರಾಗಿ ಸಹಕರಿಸುವಂತೆ ಕೇಳಿಕೊಂಡಿದ್ದು ಅವರು ಒಪ್ಪಿದ ಮೇರೆಗೆ ನಿಪಿ-3 ರಂತೆ ನೋಟಿಸನ್ನು ಜಾರಿ ಮಾಡಿರುತ್ತೇನೆ. ನಂತರ ಅವರನ್ನು ನಮ್ಮೊಂದಿಗೆ ಕರೆದುಕೊಂಡು ಸಂಜೆ 7.15 ಗಂಟೆ ಸಮಯಕ್ಕೆ ಸಿಬ್ಬಂದಿಯವರೊಂದಿಗೆ ಎ 1 ಚಿಕನ್ ಸೆಂಟರ್ ಬಳಿ ಹೋಗಿ ನೋಡಲಾಗಿ ಒಬ್ಬ ಆಸಮಿಯು  ಒಂದು ಚೀಲವನ್ನು ಇಟ್ಟುಕೊಂಡು ನಿಂತಿದ್ದು ಸದರಿ ಆಸಾಮಿಯು ನಮ್ಮನ್ನು  ನೋಡಿ ಓಡಿ ಹೋಗಲು ಪ್ರಯತ್ನ ಪಟ್ಟಿರುತ್ತಾನೆ.   ನಂತರ ಚಾಸಾ-4 ರವರು ಆತನನ್ನು  ಹಿಡಿದುಕೊಂಡು ಆತನು ಹಿಡಿದುಕೊಂಡಿದ್ದ ಚೀಲವನ್ನು ಪಂಚರ ಸಮಕ್ಷಮ ಪರಿಶೀಲಿಸಿ ನೋಡಿದಾಗ ಅದರಲ್ಲಿ ಮದ್ಯದ ಪೌಚುಗಳು ಇದ್ದವು.  ಆತನ ಹೆಸರು ಮತ್ತು ವಿಳಾಸ ಕೇಳಲಾಗಿ ತನ್ನ ಹೆಸರು ಜನಿತ್ ಬಿನ್ ನಂಜುಂಡೇಗೌಡ ಎಂದು ತಿಳಿಸಿರುತ್ತಾನೆ.  ಮದ್ಯವನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿರುವುದಾಗಿ ತಿಳಿಸಿರುತ್ತಾನೆ.   ಆತನ ಬಳಿ ಮದ್ಯ ಮಾರಾಟ ಮಾಡಲು ಯಾವುದಾದರೂ ಪರವಾನಗಿ ಇದೆಯಾ ಎಂದು ಕೇಳಲಾಗಿ ಆತ ಯಾವುದೇ ಪರವಾನಗಿ ಇಲ್ಲಾ ಎಂದು ತಿಳಿಸಿರುತ್ತಾನೆ.   ನಂತರ ಆತನು

ಪರವಾನಗಿ ಇಲ್ಲದೇ ಅಕ್ರಮವಾಗಿ ಮದ್ಯವನ್ನು ಹೊಂದಿದ್ದರಿಂದ ಆತನ ಬಳಿ ಇದ್ದ ಚೀಲವನ್ನು ಪಂಚರ ಸಮಕ್ಷಮ ಪರಿಶೀಲಿಸಿದಾಗ ಸದರಿ ಚೀಲವು ಬಿಳಿ ಬಣ್ಣದ ಚೀಲವಾಗಿರುತ್ತದೆ. ಸದರಿ ಚೀಲದಲ್ಲಿ ಇದ್ದ ಮದ್ಯವನ್ನು ನೆಲದ ಮೇಲೆ ಸುರಿದು ನೋಡಿದಾಗ 90 ಎಂಎಲ್ ನ ನಂ 1 ಹೈ ವೈ ಡಿಲಕ್ಸ್ 35 ಪೌಚುಗಳು ಇದ್ದವು, ಅವುಗಳ ಪೈಕಿ 20 ಪೌಚುಗಳ ಮೇಲೆ ಬ್ಯಾಚ್ ನಂ 34 ಎಂದು ಬರೆದಿರುತ್ತದೆ. 15 ಪೌಚುಗಳ ಮೇಲೆ ಬ್ಯಾಚ್ ನಂ 551 ಎಂದು ನಮೂದಾಗಿರುತ್ತದೆ. ಇವುಗಳ ಒಟ್ಟು ಅಂದಾಜು ಬೆಲೆ ರೂ. 979-00 ಆಗಿರುತ್ತದೆ ಎಂದು ಪಂಚರು ಅಭಿಪ್ರಾಯ ಪಟ್ಟಿರುತ್ತಾರೆ. ನಂತರ ಮದ್ಯವನ್ನು ಅದೇ ಪ್ಲಾಸ್ಟಿಕ್ ಚೀಲದಲ್ಲಿ ಹಾಕಿ ಬಾಯನ್ನು ದಾರದಿಂದ ಕಟ್ಟಿ ಪಿ ಎಂಬ ಸೀಲು ಮಾಡಿ ಕೇಸಿನ ವಿವರವನ್ನು ಒಂದು ಬಿಳಿ ಹಾಳೆಯಲ್ಲಿ ಬರೆದು ಪಂಚರ ಸಹಿ ಪಡೆದು ನಾನು ಸಹಿ ಮಾಡಿ ಚೀಲದ ಮೇಲೆ ಅಂಟಿಸಿ ಸಂಜೆ 7.15 ರಿಂದ 8.15 ರವರೆಗೆ ನಿಪಿ-1 ರಂತೆ ಮಹಜರು ಕ್ರಮ ಜರುಗಿಸಿ ಮದ್ಯ ತುಂಬಿದ್ದ ಪ್ಲಾಸ್ಟಿಕ್ ಚೀಲವನ್ನು ವಶಕ್ಕೆ ಪಡೆದು ರಾತ್ರಿ 8.30 ಗಂಟೆಗೆ ಠಾಣೆಗೆ ಬಂದು ನಿಪಿ-10 ರಂತೆ ವರದಿ ತಯಾರಿಸಿ ರಾತ್ರಿ 9.00 ಗಂಟೆಗೆ ಠಾಣಾಧಿಕಾರಿಯಾದ ಚಾಸಾ-8 ರವರಿಗೆ ಮುಂದಿನ ಕ್ರಮಕ್ಕಾಗಿ ನೀಡಿರುತ್ತೇನೆ. ಸಾಕ್ಷಿಯು ನಿಪಿ-1 ರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1(ಡಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-2 ರ ಛಾಯಾಚಿತ್ರ ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನಿಪಿ-3 ರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-10 ರ ವರದಿ ನೋಡಿ ಗುರುತಿಸಿದ್ದು ಸಾಕ್ಷಿ ಸಹಿಯನ್ನು ನಿಪಿ-10(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಮುಮಾ-1 ರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ಮುಮಾ-1(ಸಿ) ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

<u>ಪಾಟೀಸವಾಲು: ಆರೋಪಿ ಪರ ಶ್ರೀ. ಎಸ್ ಎನ್ ಎ ವಕೀಲರಿಂದ:</u>

ಠಾಣೆಗೂ ಘಟನಾ ಸ್ಥಳಕ್ಕೂ 750 ಮೀಟರ್ ಅಂತರ ಇರುತ್ತದೆ. ಆದಿನ ನಾನು ಗಸ್ತಿನಲ್ಲಿದ್ದ ಬಗ್ಗೆ ಠಾಣಾ ದಿನಚರಿಯಲ್ಲಿ ನಮೂದಿಸಿರುವುದಿಲ್ಲ. ಮುಮಾ-1 ರಲ್ಲಿರುವ ಚೀಟಿಯನ್ನು ಅಲ್ಲೇ ಅಂಟಿಸಿರುತ್ತೇನೆ. ಮುಮಾ-1 ರ ಚೀಟಿಯಲ್ಲಿ ಸಾಕ್ಷಿದಾರರ ವಿಳಾಸ ಬರೆದಿರುವುದಿಲ್ಲ. ಚಾಸಾ-2 ಮತ್ತು 3 ರವರ ಮನೆಯು ಘಟನಾ ಸ್ಥಳದಲ್ಲಿ ಇದೆಯೋ ಇಲ್ಲವೋ ನನಗೆ ನೆನಪಿಲ್ಲ. ಪಂಚರಿಗೆ ದಾಳಿಗೆ ಸಹಕರಿಸುವಂತೆ ನೋಟಿಸು ನೀಡಿರುತ್ತೇನೆ. ನನ್ನ ವರದಿಯಲ್ಲಾಗಲೀ ಮಹಜರ್ ನಲ್ಲಾಗಲೀ ಮದ್ಯದ ಉತ್ಪಾದನಾ ದಿನಾಂಕ ನಮೂದಿಸಿಲ್ಲ ಎಂದರೆ ಸರಿ. ಆರೋಪಿ ಯಾವ ಅಂಗಡಿಯಿಂದ ಮದ್ಯವನ್ನು ಖರೀದಿಸಿರುತ್ತಾನೆ ಎಂದು ನನ್ನ ವರದಿಯಲ್ಲಿ ನಮೂದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಆರೋಪಿಯನ್ನು ವಿಚಾರ ಮಾಡಿದ್ದು ಆತನು ಹೇಳಿರುವುದಿಲ್ಲ. ಆರೋಪಿಯು ಯಾವ ಬಣ್ಣದ ಬಟ್ಟೆ ಧರಿಸಿದ್ದ ಎಂದು ನೆನಪಿಲ್ಲ. ಆರೋಪಿಯಿಂದ ಯಾವುದೇ ಹಣವನ್ನು ವಶಪಡಿಸಿಕೊಂಡಿರುವುದಿಲ್ಲ. ಬೀರೂರಿನ ಖಾಸಗಿ ಬಸ್ ನಿಲ್ದಾಣ ಬಿಟ್ಟರೆ ಬಸ್ಸುಗಳು ಹಾಲದ ಮರದ ಶಿವಾಜಿ ಸರ್ಕಲ್ ಬಳಿ ನಿಲ್ಲಿಸಿರುತ್ತಾರೆ ಎಂದರೆ ಸರಿ. ಆರೋಪಿಗೂ ಮುಮಾಗೂ ಸಂಬಂಧ ಇಲ್ಲದಿದ್ದರೆ ಸುಳ್ಳು ಪ್ರಕರಣ

ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿ ಸೊಸೆ ಮನೆಗೆ ಹೋಗುತ್ತಿರುವಾಗ ಆತನನ್ನು ಹಿಡಿದು ಆತನ ವಿರುದ್ದ ಸುಳ್ಳು ವರದಿ ನೀಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.